ಓ.ಎಸ್. ನಂಃ 546/2022
ಡಿ.ಡಬ್ಲ್ಯೂ-1 (ರಾಮಪ್ಪ)

ದಿನಾಂಕ: 27-01-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀಸವಾಲುಃ ಶ್ರೀ. ಎನ್.ಎಸ್.ಜಿ. ವಾದಿ ಪರ ವಕೀಲರಿಂದಃ**

ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರಕ್ಕೆ ನಾನೇ ಮಾಹಿತಿ ಕೊಟ್ಟಿರುತ್ತೇನೆ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿರುವ ವಿಷಯಗಳನ್ನು ನಾನು ಓದಿ ತಿಳಿದುಕೊಂಡಿಲ್ಲ. ಯಾವುದೇ ಒಂದು ದಾಖಲೆಗೆ ಸಹಿ ಮಾಡುವ ಪೂರ್ವದಲ್ಲಿ ಅದರಲ್ಲಿ ಬರೆದ ವಿಷಯಗಳನ್ನು ಬೇರೆಯವರಿಂದ ಓದಿಸಿ ತಿಳಿದುಕೊಂಡು ಸಹಿ ಮಾಡುತ್ತೇನೆ ಎಂದರೆ ಸರಿ. ನಾನು ಈ ಸಾಕ್ಷಿಯನ್ನು ನನ್ನ ಹಾಗೂ ಪ್ರತಿವಾದಿ 1, 2, 4 ರಿಂದ 8 ರವರ ಪರ ಕೊಡುತ್ತಿದ್ದೇನೆ. ಸದರಿ ಪ್ರತಿವಾದಿಯರು ಅವರ ಪರವಾಗಿ ಸಾಕ್ಷಿ ನುಡಿಯಲು ಬರವಣಿಗೆಯಲ್ಲಿ ಯಾವುದೇ ದಾಖಲೆ ಬರೆದುಕೊಟ್ಟಿಲ್ಲ.

2. 2ನೇ ಪ್ರತಿವಾದಿ ನನ್ನ ಅಣ್ಣ ಎಂದರೆ ಸರಿ. ಮೃತ ಲಕ್ಷ್ಮಣ ಸಿದ್ದಪ್ಪ ವಡೇರ ನನ್ನ ತಮ್ಮ ಎಂದರೆ ಸರಿ. ನನ್ನ ತಮ್ಮ ಲಕ್ಷ್ಮಣ ದಿಃ02/02/2021 ರಂದು ಅನಾರೋಗ್ಯದಿಂದ ಮೃತಪಟ್ಟಿರುತ್ತಾರೆ ಎಂದರೆ ಸರಿ. ನನ್ನ ತಮ್ಮ ಮೃತಪಡುವುದಕ್ಕಿಂತ 06 ತಿಂಗಳ ಮೊದಲಿನಿಂದ ಅವರ ಆರೋಗ್ಯ ಸರಿ ಇರಲಿಲ್ಲ. ನನ್ನ ತಮ್ಮನ ಲಿವರ್ ಹಾಳಾಗಿತ್ತು. ನನ್ನ ತಮ್ಮನನ್ನು ಗೋಕಾಕಿನ ಜಯರತ್ನ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಿರುತ್ತೇವೆ. ನನ್ನ ತಮ್ಮ ಮೃತಪಡುವುದಕ್ಕಿಂತ 02-03 ವರ್ಷ ಮೊದಲಿನಿಂದಲು ಅವರ ಆರೋಗ್ಯ ಸರಿ ಇರಲಿಲ್ಲ ಎಂದರೆ ಸರಿಯಲ್ಲ.

3. ಪ್ರತಿವಾದಿ 4 ರಿಂದ 7 ಮೃತ ನನ್ನ ಸಹೋದರ ಲಕ್ಷ್ಮಣ ಇವರ ಹೆಂಡತಿ ಮತ್ತು ಮಕ್ಕಳು ಎಂದರೆ ಸರಿ. ನನ್ನ ಸಹೋದರ ಲಕ್ಷ್ಮಣ ಇವರ ಮರಣಾ ನಂತರ ಅವರ ಹಕ್ಕುಬಾಧ್ಯತೆಗಳನ್ನು ವಾರಸಾ ನಾತೆಯಿಂದ ಅವರ ಹೆಂಡತಿ ಮತ್ತು ಮಕ್ಕಳು ಪಡೆದುಕೊಂಡಿರುತ್ತಾರೆ ಎಂದರೆ ಸರಿ.

4. 1ನೇ ಪ್ರತಿವಾದಿ ನನ್ನ ಚಿಕ್ಕಪ್ಪ. 1ನೇ ಪ್ರತಿವಾದಿಗು ಮೇಲಿಂದ ಮೇಲೆ ಆರೋಗ್ಯ ಸರಿ ಇರುವುದಿಲ್ಲ ಎಂದರೆ ಸರಿಯಲ್ಲ. 1ನೇ ಪ್ರತಿವಾದಿ ತಮ್ಮ ಆರೋಗ್ಯ ಸರಿ ಇಲ್ಲದೇ ಇದ್ದುದ್ದಕ್ಕಾಗಿ ಮಿರಜನಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ ಎಂದರೆ ಸರಿಯಲ್ಲ. 8ನೇ ಪ್ರತಿವಾದಿ ನನ್ನ ಚಿಕ್ಕಪ್ಪನ ಮಗ.

5. ಸರ್ವೆ ನಂ.50/4 ರಲ್ಲಿಯ 04ಎಕರೆ ಜಮೀನು ನನ್ನ, ಪ್ರತಿವಾದಿ 1, 2, 8 ಹಾಗೂ ಮೃತ ನನ್ನ ಸಹೋದರ ಲಕ್ಷ್ಮಣ ಮತ್ತು ಅಪರಾಯಪ್ಪ ಇವರಿಗೆ ತಮ್ಮ ಸ್ವಂತ ಮಾಲ್ಕೀ ವಹಿವಾಟಿಯ ಜಮೀನು ಎಂದರೆ ಹಿರಿಯರಿಂದ ಬಂದ ಆಸ್ತಿ ಎಂದು ಹೇಳುತ್ತಾರೆ. ಸದರಿ ಜಮೀನಿನ ಪಹಣಿ ಪತ್ರಿಕೆಯಲ್ಲಿ ಈ ಮೇಲೆ ಹೇಳಿದವರು ಮಾಲೀಕರು ಎಂದು ನಮೂದು ಇದೆ ಎಂದರೆ ಸರಿ. ಅದೇ ರೀತಿ ಸದರಿಯವರು ಕಬ್ಜಾ ವಹಿವಾಟಿಯಲ್ಲಿ ಇದ್ದಾರೆ ಎಂದರೆ ಸರಿ. ಸದರಿ 04ಎಕರೆ ಜಮೀನಿನ ದಕ್ಷಿಣಕ್ಕೆ ವಾದಿಯ ತಂದೆಯ ಹೆಸರಿನಲ್ಲಿ ಜಮೀನು ಇದೆ ಎಂದರೆ ಸರಿ.

6. ನಾವು ನಮ್ಮ ಕುಟುಂಬದ ಅಡಚಣೆಗಾಗಿ ಕೈಗಡ ಸಾಲ ಮಾಡಿದ್ದೆವು ಮತ್ತು ಬ್ಯಾಂಕ ಹಾಗೂ ಸೊಸೈಟಿಗಳಲ್ಲಿಯು ಸಹ ಸಾಲ ಮಾಡಿದ್ದೇವು ಎಂದರೆ ಸರಿಯಲ್ಲ. ನಾವು ಬ್ಯಾಂಕ ಮತ್ತು ಸೊಸೈಟಿಯಲ್ಲಿ ಪಡೆದ ಸಾಲವನ್ನು ದಾವಾ ಆಸ್ತಿಯ ಉತಾರದಲ್ಲಿ ನಮೂದು ಮಾಡಲಾಗಿದೆ ಎಂದರೆ ಸರಿ.

7. ಸರ್ವೆ ನಂ.50 ಒಟ್ಟು 19ಎ-01ಗು, ಅದರಲ್ಲಿ ಖರಾಬ ಜಮೀನು 10ಗುಂಟೆ, ಸಾಗುವಳಿಗೆ ಉಳಿದ ಬಾಕಿ ಜಮೀನು 18ಎ-31ಗು ಎಂದರೆ ಸರಿ. 2022 ರಲ್ಲಿ ಸರ್ವೆ ನಂ.50 ರ ಸರ್ವೆಯಾಗಿ ಎಂ.ಆರ್.ನಂ.ಟಿ-162/2021-22 ಮಂಜೂರಾಗಿದೆ ಎಂದರೆ ಸರಿ. ಸದರಿ ಜಮೀನು ಫೋಡಿಯಾಗಿ ನಮಗೆ ಬಂದ 04ಎಕರೆ ಜಮೀನಿಗೆ ಸರ್ವೆ ನಂ.50/4 ಎಂದು ಕೊಡಲಾಗಿದೆ ಎಂದರೆ ಸರಿ.

8. ಸರ್ವೆ ನಂ.50 ರಲ್ಲಿಯ ನಮ್ಮ ಹಿಸ್ಸೆಯ 04ಎಕರೆ ಜಮೀನಿನ ಪೈಕಿ ನಾವು ಮಾರುತಿ ಚಿಗಡೊಳ್ಳಿ ಇವರಿಗೆ 01ಎಕರೆ ಜಮೀನು ರೂ.5,00,000/-ಕ್ಕೆ ಮಾರಾಟಕ್ಕೆ ತೆಗೆದಿದ್ದೆವು ಎಂದರೆ ಸರಿಯಲ್ಲ. ಸದರಿಯವರಿಂದ ರೂ.4,80,000/- ಪಡೆದು ದಿಃ15/10/2018 ರಂದು ಒಂದು ನೋಂದಾಯಿತ ಖರೀದಿ ಕರಾರ ಪತ್ರ ಬರೆದುಕೊಟ್ಟಿದ್ದೇವು ಎಂದರೆ ಸರಿಯಲ್ಲ. ಸದರಿ ಖರೀದಿ ಕರಾರ ಪತ್ರದ ಆಧಾರದ ಮೇಲೆ ಮಾರುತಿ ಚಿಗಡೊಳ್ಳಿ ಇವರು ನಮಗೆ ಖರೀದಿ ಪತ್ರ ಬರೆದುಕೊಡಿ ಎಂದು ಮೇಲಿಂದ ಮೇಲೆ ಕೇಳುತ್ತಿದ್ದರು ಎಂದರೆ ಸರಿಯಲ್ಲ.

9. ನಾವು ಮಾರುತಿ ಚಿಗಡೊಳ್ಳಿ ಇವರಿಗೆ ಹೆಚ್ಚಿನ ಹಣ ಕೇಳಿದ್ದಕ್ಕಾಗಿ ಅವರು ನಮ್ಮ ಜೊತೆ ರಾಜಿಯಾಗಿ ಅವರು ನಮಗೆ ಮುಂಗಡವಾಗಿ ಕೊಟ್ಟ ಹಣವನ್ನು ವಾಪಸು ಕೊಡಲು ಕೇಳಿದ್ದಾರೆ ಎಂದರೆ ಸರಿಯಲ್ಲ. ನಾವು ಬೇರೆಯವರ ಕಡೆಯಿಂದ ಕೈಗಡ ಸಾಲ ಮಾಡಿ ರೂ.4,80,000/- ಹಣವನ್ನು ಮಾರುತಿ ಚಿಗಡೊಳ್ಳಿ ಇವರಿಗೆ ಕೊಟ್ಟಿರುತ್ತೇವೆ ಎಂದರೆ ಸಾಕ್ಷಿದಾರರು ಮನೆಯಲ್ಲಿ ಇದ್ದ ದುಡ್ಡು ಕೊಟ್ಟಿದ್ದಾಗಿ ಹೇಳುತ್ತಾರೆ. ಮಾರುತಿ ಚಿಗಡೊಳ್ಳಿ ಇವರಿಗೆ ಕೊಡಬೇಕಾದ ರೂ.4,80,000/- ನ್ನು ನಮ್ಮ ಬಳಿ ಮನೆಯಲ್ಲಿ ಹಣ ಇರದೇ ಇದ್ದುದ್ದರಿಂದ ಬೇರೆಯವರಿಂದ ಸಾಲ ಪಡೆದು ಕೊಟ್ಟಿರುತ್ತೇವೆ ಎಂದರೆ ಸರಿಯಲ್ಲ. ನಾವು ಬೇರೆಯವರ ಬಳಿ ರೂ.4,80,000/- ಸಾಲ ಮಾಡಿ ಮಾರುತಿ ಚಿಗಡೊಳ್ಳಿ ಇವರಿಗೆ ದುಡ್ಡು ಕೊಟ್ಟಿದ್ದರೂ ಸಹ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

10. ನಾನ, ಪ್ರತಿವಾದಿ 1, 2, ಮೃತ ನನ್ನ ಸಹೋದರ ಲಕ್ಷ್ಮಣ ಹಾಗೂ 8ನೇ ಪ್ರತಿವಾದಿ ಸೇರಿ ನಮ್ಮ ಕುಟುಂಬದ ಅಡಚಣೆಗಾಗಿ 2020ರಲ್ಲಿ ನಮ್ಮ 04ಎಕರೆ ಜಮೀನಿನ ಪೈಕಿ 02ಎಕರೆ ಜಮೀನು ಮಾರಾಟಕ್ಕೆ ತೆಗೆದಿದ್ದೇವೆ ಎಂದರೆ ಸರಿಯಲ್ಲ. ಸದರಿ 02ಎಕರೆ ಜಮೀನಿನ ದಕ್ಷಿಣಕ್ಕೆ ವಾದಿಯ ತಂದೆಯ ಹೆಸರಿನಲ್ಲಿ ಜಮೀನು ಇದೆ ಎಂದರೆ ಸರಿಯಲ್ಲ. ನಾವು ಉದಗಟ್ಟಿ ಗ್ರಾಮದಲ್ಲಿ ನಮ್ಮ 02ಎಕರೆ ಜಮೀನು ಮಾರಾಟ ಮಾಡುವುದು ಇದೆ ಎದು ಸಾರ್ವಜನಿಕವಾಗಿ ಪ್ರಚಾರ ಮಾಡಿದ್ದೇವು ಎಂದರೆ ಸರಿಯಲ್ಲ. ನಾವು ಮಾರಾಟ ಮಾಡಲು ತೆಗೆದ

ಜಮೀನಿನ ದಕ್ಷಿಣಕ್ಕೆ ವಾದಿಯ ತಂದೆಯ ಜಮೀನು ಇದ್ದುದ್ದರಿಂದ ಅವರಿಗು ಸಹ ನಮ್ಮ ಜಮೀನು ಖರೀದಿ ಮಾಡಲು ಕೇಳಿದ್ದೆವು ಎಂದರೆ ಸರಿಯಲ್ಲ.

11. ಸದರಿ ನಾವು ಮಾರಾಟ ಮಾಡಲು ತೆಗೆದ 02ಎಕರೆ ಜಮೀನಿನ ಪೂರ್ವಕ್ಕೆ- ಹಳ್ಳ, ಪಶ್ಚಿಮಕ್ಕೆ- ರಸ್ತೆ, ದಕ್ಷಿಣಕ್ಕೆ - ವಾದಿಯ ತಂದೆಯ ಜಮೀನು, ಉತ್ತರಕ್ಕೆ- ಅಪರಾಯಪ್ಪ ಭೂತಪ್ಪ ವಡೇರ ಇವರ ಜಮೀನು ಎಂದರೆ ಸರಿಯಲ್ಲ. ಸಾಕ್ಷಿದಾರರು ಉತ್ತರಕ್ಕೆ- ಕೃಷ್ಣಾ ಶ್ರೀಮಂತ ರೆಡ್ಡಿ ಇವರ ಜಮೀನು ಇದೆ ಎಂದು ಹೇಳುತ್ತಾರೆ. ನಮ್ಮ 04ಎಕರೆ ಜಮೀನಿನ ಉತ್ತರಕ್ಕೆ- ಕೃಷ್ಣಾ ಶ್ರೀಮಂತ ರೆಡ್ಡಿ ಇವರ ಜಮೀನು ಇದೆ.

12. ನಾವು ಮಾರಾಟ ಮಾಡಲು ತೆಗದ 02ಎಕರೆ ಜಮೀನು ವಾದಿಯರ ಜಮೀನಿಗೆ ಹತ್ತಿಕೊಂಡಿದ್ದರಿಂದ ಅವರು ಸದರಿ ಜಮೀನು ಖರೀದಿ ತೆಗೆದುಕೊಳ್ಳುತ್ತೇವೆ ಎಂದು ನಮ್ಮ ಜೊತೆ ಮಾತನಾಡಿರುತ್ತ-ರೆ ಎಂದರೆ ಸರಿಯಲ್ಲ. ಸದರಿ 02ಎಕರೆ ಜಮೀನಿನ ಖರೀದಿ ಕುರಿತು ವಾದಿ ಹಾಗೂ ನಮ್ಮ ನಡುವೆ ಮಾತುಕತೆ ಆಗಿದೆ ಎಂದರೆ ಸರಿಯಲ್ಲ. ನಾವು 02ಎಕರೆ ಜಮೀನನ್ನು ವಾದಿಗೆ ರೂ.16,00,000/- ಕ್ಕೆ ಮಾರಾಟ ಮಾಡಲು ಒಪ್ಪಿದ್ದೇವು ಎಂದರೆ ಸರಿಯಲ್ಲ. ಮಾತುಕತೆ ಸಮಯದಲ್ಲಿ ರೂ.16,00,000/- ದ ಪೈಕಿ ರೂ.15,00,000/- ಮುಂಗಡವಾಗಿ ಕೊಡಬೇಕೆಂದು ವಾದಿಗೆ ಹೇಳಿದ್ದೆವು ಎಂದರೆ ಸರಿಯಲ್ಲ. ವಾದಿಯು ಅದಕ್ಕೆ ಒಪ್ಪಿಕೊಂಡಿರುತ್ತಾರೆ ಎಂದರೆ ಸರಿಯಲ್ಲ.

13. ನಾವು ನಮ್ಮ ಕುಟುಂಬದಲ್ಲಿ ವಾಟ್ನಿ ಮಾಡಿಕೊಂಡು ಮಾರಾಟ ಮಾಡಲು ತೆಗೆದ 02ಎಕರೆ ಜಮೀನಿನ ನಕಾಶೆ ಮಾಡಿಸಿ ಖರೀದಿ ಪತ್ರ ಬರೆದುಕೊಡುತ್ತೇವೆ ಎಂದು ಹೇಳಿ ಮಾತುಕತೆ ಆಗಿತ್ತು ಎಂದರೆ ಸರಿಯಲ್ಲ. ದಿನಾಂಕ 04/06/2020 ರಂದು ವಾದಿಯನ್ನು ಕರೆದುಕೊಂಡು ನಾವು ಮತ್ತು ಹಿರಿಯರಾದ ಮಲಕಾರಿ ವಡೇರ, ಶಂಕರ ವಡೇರ, ಸಿದ್ದಪ್ಪ ಕಳ್ಳಿಗುದ್ದಿ ಇವರನ್ನು ಕರೆದುಕೊಂಡು ದಸ್ತು ಬರಹಗಾರರಾದ ಗೋಟಡಕಿ ಇವರ ಕಚೇರಿಗೆ ಬಂದಿದ್ದೆವು ಎಂದರೆ ಸರಿಯಲ್ಲ.

14. ಮಲಕಾರಿ ವಡೇರ ಮತ್ತು ಶಂಕರ ವಡೇರ ನನ್ನ ಸಂಬಂಧಿಕರು ಎಂದರೆ ಸರಿಯಲ್ಲ. 1ನೇ ಪ್ರತಿವಾದಿಯ ಮಗಳನ್ನು ಮಲಕಾರಿ ವಡೇರ ಇವರ ತಮ್ಮನಿಗೆ ಮದುವೆ ಮಾಡಿಕೊಡಲಾಗಿದೆ ಎಂದರೆ ಸರಿ. ಸಿದ್ದಪ್ಪ ಕಳ್ಳಿಗುದ್ದಿ ಇವರು ನಮ್ಮ ಸಮಾಜದವರು ಎಂದರೆ ಸರಿ. ಮಲಕಾರಿ ವಡೇರ ಮತ್ತು ಶಂಕರ ವಡೇರ ನನ್ನ ಖಾಸ ಸಂಬಂಧಿಕರು ಇದ್ದರೂ ಸಹ ಸಂಬಂಧಿಕರಲ್ಲ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

15. ನಾವು ನಮ್ಮ ಗುರುತಿನ ಚೀಟಿಗಳನ್ನು ಮತ್ತು ದಾವಾ ಆಸ್ತಿಯ ದಾಖಲೆಗಳನ್ನು ಕೊಟ್ಟು ಮಾತುಕತೆ ಆದ ಪ್ರಕಾರ ಖರೀದಿ ಕರಾರ ಪತ್ರ ಬರೆಯಲು ಗೋಟಡಕಿ ಇವರಿಗೆ ಮಾಹಿತಿಯನ್ನು ಕೊಟ್ಟಿದ್ದೆವು ಎಂದರೆ ಸರಿಯಲ್ಲ. ನಾವು ಮಾಹಿತಿ ಕೊಟ್ಟ ಪ್ರಕಾರ ಆನಂದ ಗೋಟಡಕಿ ಇವರು ಖರೀದಿ ಕರಾರ ಪತ್ರ ತಯಾರ ಮಾಡಿರುತ್ತಾರೆ ಎಂದರೆ ವಾದಿ ನಮಗೆ ಕೊಟ್ಟ

ರೂ.8,50,000/- ಕ್ಕೆ ಆಧಾರ ವಾಗಿ ಖರೀದಿ ಕರಾರ ಪತ್ರ ಮಾಡಿರುತ್ತಾರೆ ಎಂದು ಹೇಳುತ್ತಾರೆ.

16. ಖರೀದಿ ಕರಾರ ಪತ್ರ ಬರೆದ ನಂತರ ಆನಂದ ಗೋಟಡಕಿ ಇವರು ಖರೀದಿ ಕರಾರ ಪತ್ರದಲ್ಲಿರುವ ಎಲ್ಲ ವಿಷಯಗಳನ್ನು ನಮಗೆಲ್ಲ ಓದಿ ಹೇಳಿರುತ್ತಾರೆ ಎಂದರೆ ಸರಿಯಲ್ಲ. ವಾದಿಯಿಂದ ಮುಂಗಡವಾಗಿ ರೂ.15,00,000/- ಪಡೆದುಕೊಂಡು ಖರೀದಿ ಕರಾರ ಪತ್ರದಲ್ಲಿ ಬರೆದಿರುವ ವಿಷಯ ಸರಿ ಇದ ಎಂದು ಹೇಳಿ ನಾನು ಮತ್ತು ಇತರೇ ಪ್ರತಿವಾದಿಯರು ಖರೀದಿ ಕರಾರ ಪತ್ರಕ್ಕೆ ಸಹಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ನಾವು ಸಹಿ ಮಾಡಿದ ನಂತರ ವಾದಿ ಖರೀದಿ ಕರಾರ ಪತ್ರಕ್ಕೆ ಸಹಿ ಮಾಡಿರುತ್ತಾರೆ ಎಂದರೆ ಸರಿ.

17.ಸದರಿ ದಾಖಲೆಗೆ ನಮ್ಮ ಹೇಳಿಕೆಯ ಮೇರೆಗೆ ನಮ್ಮ ಸಂಬಂಧಿಕರಾದ ಮಲಕಾರಿ ವಡೇರ, ಶಂಕರ ವಡೇರ, ಸಿದ್ದಪ್ಪ ಕಳ್ಳಿಗುದ್ದಿ ಇವರು ಖರೀದಿ ಕರಾರ ಪತ್ರಕ್ಕೆ ಸಹಿ ಮಾಡಿರುತ್ತಾರೆ ಎಂದರೆ ಸಾಕ್ಷಿದಾರರು ಸದರಿಯವರು ತಮ್ಮ ಪರವಾಗಿ ಸಹಿ ಮಾಡಿಲ್ಲ ಎಂದು ಹೇಳುತ್ತಾರೆ. ಸದರಿ ಖರೀದಿ ಕರಾರ ಪತ್ರಕ್ಕೆ ನಾವು, ವಾದಿ ಮತ್ತು ಸಾಕ್ಷಿದಾರರು ಸಹಿ ಮಾಡಿದ ನಂತರ ಅದಕ್ಕೆ ಆನಂದ ಗೋಟಡಕಿ ಇವರು ಸಹಿ ಮಾಡಿ ತಮ್ಮ ಸೀಲ್ ಹಾಕಿರುತ್ತಾರೆ ಎಂದರೆ ಸರಿ.

18. ಕೈಗಡ ಸಾಲ ತೆಗೆದುಕೊಂಡಲ್ಲಿ ಕೈಗಡ ಸಾಲ ಪತ್ರ ಬರೆಯುತ್ತಾರೆ ಎಂದರೆ ಸರಿಯಲ್ಲ. ಈಗ ಸಾಕ್ಷಿದಾರರಿಗೆ ಖರೀದಿ ಕರಾರ ಪತ್ರ ಓದಿ ಹೇಳಿದಾಗ

ವಾದಿ ನಮಗೆ ರೂ.15,00,000/- ಕೇವಲ ರೂ.8,50,000/- ಕೊಟ್ಟಿರುತ್ತಾರೆ ಎಂದು ಹೇಳಿ ನೀವೇನಾದರೂ ತಕರಾರು ಮಾಡಿದ್ದೀರಾ ಎಂದು ಪ್ರಶ್ನಿಸಿದರೆ ಸಾಕ್ಷಿದಾರರು ತಾವು ಹೆಬ್ಬಟ್ಟಿನವರು ನಮಗೆ ಕೇವಲ ರೂ.8,50,000/- ಮಾತ್ರ ಬಂದಿರುತ್ತವೆ ರೂ.15,00,000/- ಬಂದಿಲ್ಲವೆಂದು ತಕರಾರು ಮಾಡಿಲ್ಲ.

19. ಅಮಸಿದ್ದ ವಡೇರ ಮತ್ತು ನನ್ನ ತಮ್ಮ ಲಕ್ಷ್ಮಣ ವಡೇರ ಇಂಗ್ಲೀಷನಲ್ಲಿ ಸಹಿ ಮಾಡುತ್ತಾರೆ ಎಂದರೆ ಸರಿ. ಅಮಸಿದ್ದ ವಡೇರ ಮತ್ತು ನನ್ನ ತಮ್ಮ ಲಕ್ಷ್ಮಣ ವಡೇರ ವಿದ್ಯಾಭ್ಯಾಸ ಮಾಡಿದ್ದಾರೆ ಎಂದರೆ ಸರಿ. ನನ್ನ ಚಿಕ್ಕಪ್ಪ ಅಂದರೆ 1ನೇ ಪ್ರತಿವಾದಿಯು ಸಹ ವಿದ್ಯಾಭ್ಯಾಸ ಮಾಡಿದ್ದಾರೆ ಎಂದರೆ ಸರಿ. ದಸ್ತಾವೇಜ ಬರಹಗಾರರ ಕಚೇರಿಯಲ್ಲಿ ನಾವು ರೂ.15,00,000/- ವಾದಿಯಿಂದ ಪಡೆದಿದ್ದಕ್ಕಾಗಿ ಖರೀದಿ ಕರಾರ ಪತ್ರಕ್ಕೆ ಸಹಿ ಮಾಡುವ ಪೂರ್ವದಲ್ಲಿ ನಾವು ಯಾವುದೇ ತಕರಾರು ಮಾಡಿಲ್ಲ ಎಂದರೆ ಸರಿಯಲ್ಲ. ನಾವು ವಾದಿಯಿಂದ ಖರೀದಿ ಮೊತ್ತದ ಪೈಕಿ ರೂ.15,00,000/- ಪಡೆದುಕೊಂಡಿದ್ದರೂ ಸಹ ವಾದಿಯಿಂದ ನಾವು ಕೇವಲ ರೂ.8,50,000/- ಬಡ್ಡಿಯ ಮೇಲೆ ಕೈಗಡ ಸಾಲ ತೆಗೆದುಕೊಂಡಿದ್ದೆವು ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿ ನಮಗೆ ಕೇವಲ ರೂ.8,50,000/- ಕೊಟ್ಟಿದ್ದಾರೆ ಎಂದು ತೋರಿಸಲು ನಮ್ಮ ಬಳಿ ಯಾವುದೇ ದಾಖಲೆ ಇರುವುದಿಲ್ಲ.

ಮುಂದುವರೆದ ಪಾಟೀಸವಾಲಿಗೆ ಸಮಯ ಕೋರುತ್ತಾರೆ. ಸಮಯ ಕೊಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಪ್ರಕಾರ ಬೆರಳಚ್ಚು ಮಾಡಲಾಗಿದೆ)

ಓ ಹೇ ಕೇ ಸರಿ ಇದೆ.

(ಉಮೇಶ ಎಸ್. ಅತನೂರೆ)
ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಗೋಕಾಕ.

ಸಾಕ್ಷಿಯ ಸಹಿ